# ಜಂಬಣ್ಣ ಅಮರಚಿಂತರ ಪೆಟ್ರೋಮ್ಯಾಕ್ಸ್ ಹೊತ್ತವರು ಕಾವ್ಯದಲ್ಲಿ ಹಸಿವು

ಪ್ರಕಾಶ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ದಯಾನಂದ ಸಾಗರ್ ಬಿಸಿನೆಸ್ ಅಕಾಡೆಮಿ, ಬೆಂಗಳೂರು.

DOI: https://doi.org/10.5281/zenodo.17487051

## ABSTRACT:

ಜಂಬಣ್ಣ ಅಮರಚಿಂತರು ದಲಿತ / ಬಂಡಾಯ ಸಾಹಿತ್ಯ ಪ್ರಕಾರದಲ್ಲಿ ಕಂಡು ಬಂದಂತಹ ಅದ್ಭುತ ಪ್ರತಿಭೆ. ಶತಶತಮಾನಗಳಿಂದ ತುಳಿತಕ್ಕೆ ಒಳಗಾದವರ ಕೆಳವರ್ಗದ ಜನಾಂಗದವರು ಅನುಭವಿಸುವ ನೋವನ್ನು ತಮ್ಮ ಕಾವ್ಯಗಳಲ್ಲಿ ಪ್ರತಿಬಿಂಬಿಸುವ ಕಾರ್ಯವನ್ನು ಮಾಡಿದ್ದಾರೆ. ಆರೋಗ್ಯ ಇಲಾಖೆಯಲ್ಲಿದ್ದುಕೊಂಡು ಎಂ ಎ ಪದವೀಧರರಾಗಿ ನಂತರ ಪ್ರವೃತ್ತಿಯಿಂದ ಚಿಂತನಶೀಲ ಬರಹಗಾರರಾದರು. ಶೋಷಿತರ ಧ್ವನಿಯಾಗಿ ನಿಂತ ಪ್ರಮುಖ ಬರಹಗಾರರು. ಸಮಾನತೆಯನ್ನು ಸಾರಲು ಹೊರಟ ಭಗವಾನ್ ಬುದ್ಧ ನಂತರ ಬಸವಣ್ಣ ಹಾಗೆಯೇ ಡಾ. ಬಿ.ಆರ್. ಅಂಬೇಡ್ಕರ್ ಆಯಾ ಶತಮಾನದಲ್ಲಿ ಶೋಷಣೆಯನ್ನು ಧಿಕ್ಕರಿಸಿ ನಿಂತರು. 12ನೇ ಶತಮಾನದಲ್ಲಿ ಬಸವಣ್ಣನವರು ಸಾಮಾಜಿಕ ಕ್ರಾಂತಿಯನ್ನು ಮಾಡಿದರು. ಅಂತರ್ಜಾತಿ ವಿವಾಹಗಳನ್ನು ಮಾಡಿಸುವುದರ ಮೂಲಕ ಈ ನೆಲದಲ್ಲಿ ನೆಲೆಯೂರಿದ್ದ ಜಾತಿ ಮತ್ತು ಶೋಷಣೆಯನ್ನು ಹೋಗಲಾಡಿಸಲು ಪ್ರಯತ್ನಪಟ್ಟರು.

## KEYWORDS:

ಸೈಜುಗಲ್ಲ, ವರಗಿದೋರು, ಆಯಾಗಾರ, ಪೆಟ್ರೋಮ್ಯಾಕ್ಸ್, ಗ್ಯಾಸ್, ಆವಿಯಾಗಿ.

ಜಂಬಣ್ಣ ಅಮರಚಿಂತರು ದಲಿತ / ಬಂಡಾಯ ಸಾಹಿತ್ಯ ಪ್ರಕಾರದಲ್ಲಿ ಕಂಡು ಬಂದಂತಹ ಅದ್ಭುತ ಪ್ರತಿಭೆ. ಶತಶತಮಾನಗಳಿಂದ ತುಳಿತಕ್ಕೆ ಒಳಗಾದವರ ಕೆಳವರ್ಗದ ಜನಾಂಗದವರು ಅನುಭವಿಸುವ ನೋವನ್ನು ತಮ್ಮ ಕಾವ್ಯಗಳಲ್ಲಿ ಪ್ರತಿಬಿಂಬಿಸುವ ಕಾರ್ಯವನ್ನು ಮಾಡಿದ್ದಾರೆ. ಆರೋಗ್ಯ ಇಲಾಖೆಯಲ್ಲಿದ್ದುಕೊಂಡು ಎಂ ಎ ಪದವೀಧರರಾಗಿ ನಂತರ ಪ್ರವೃತ್ತಿಯಿಂದ ಚಿಂತನಶೀಲ ಬರಹಗಾರರಾದರು. ಶೋಷಿತರ ಧ್ವನಿಯಾಗಿ ನಿಂತ ಪ್ರಮುಖ ಬರಹಗಾರರು. ಸಮಾನತೆಯನ್ನು ಸಾರಲು ಹೊರಟ ಭಗವಾನ್ ಬುದ್ಧ ನಂತರ ಬಸವಣ್ಣ ಹಾಗೆಯೇ ಡಾ. ಬಿ.ಆರ್. ಅಂಬೇಡ್ಕರ್ ಆಯಾ ಶತಮಾನದಲ್ಲಿ ಶೋಷಣೆಯನ್ನು ಧಿಕ್ಕರಿಸಿ ನಿಂತರು. 12ನೇ ಶತಮಾನದಲ್ಲಿ ಬಸವಣ್ಣನವರು ಸಾಮಾಜಿಕ ಕ್ರಾಂತಿಯನ್ನು ಮಾಡಿದರು. ಅಂತರ್ಜಾತಿ ವಿವಾಹಗಳನ್ನು

ಮಾಡಿಸುವುದರ ಮೂಲಕ ಈ ನೆಲದಲ್ಲಿ ನೆಲೆಯೂರಿದ್ದ ಜಾತಿ ಮತ್ತು ಶೋಷಣೆಯನ್ನು ಹೋಗಲಾಡಿಸಲು ಪ್ರಯತ್ನಪಟ್ಟರು.

ನಂತರ ಡಾ. ಬಿ.ಆರ್. ಅಂಬೇಡ್ಕರ್ ಸಮಾನತೆಯನ್ನು ಸಾರುವ ಉದ್ದೇಶದಿಂದ ಸಂವಿಧಾನವನ್ನು ರಚಿಸಿ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು ಎಂಬುದನ್ನು ಒತ್ತಿ ಹೇಳಿದ್ದಾರೆ. ರಾಜನಾದವನು ಹಿಂದೆ ರಾಣಿಯರ ಗರ್ಭದಲ್ಲಿ ಜನಿಸುತ್ತಿದ್ದರು. ಆದರೆ ಈಗ ಮತಪೆಟ್ಟಿಗೆಯಲ್ಲಿ ಜನಿಸುತ್ತಾರೆ ಎಂಬ ಸಂದೇಶವನ್ನು ಕೊಟ್ಟರು.

**"ಸರ್ವಜನಾಂಗದ ಶಾಂತಿಯ ತೋಟ"**

ಎಂದು ಕುವೆಂಪುರವರು ಸಹ ಶೋಷಣೆಯ ವಿರುದ್ಧ ಧ್ವನಿಗೂಡಿಸಿದ್ದಾರೆ.

**'ಹಸಿವಿನಿಂದ ಸತ್ತೋರು ಸೈಜುಗಲ್ಲ ಹೊತ್ತೋರು**
**ವದೆಸಿಕೊಂಡು ವರಗಿದೋರು ನನ್ನ ಜನಗಳು'**

ಎಂದು ಕವಿ ಡಾ. ಸಿದ್ದಲಿಂಗಯ್ಯನವರು ದಲಿತರ ಶೋಷಿತರ ಬಗ್ಗೆ ತಮ್ಮ ಕವಿತೆ 'ನನ್ನ ಜನಗಳು' ಪದ್ಯದಲ್ಲಿ ಶತಮಾನಗಳಿಂದ ಅನುಭವಿಸಿದ ಹಸಿವು ನೋವು ಹಾಗೂ ಶ್ರೀಮಂತರ ದಬ್ಬಾಳಿಕೆಯ ಬಗ್ಗೆ ಹಾಡಿದ್ದಾರೆ.

ಹೀಗೆ ಶತಶತಮಾನಗಳಿಂದ ಶೋಷಣೆಗೆ ಒಳಗಾದ ಜನರನ್ನು ಎಚ್ಚರಗೊಳಿಸಲು ಎಷ್ಟು ಗಣ್ಯವ್ಯಕ್ತಿಗಳು ಜನಿಸಿದರೂ ಸಹ ಶ್ರೀಮಂತರ ಶೋಷಣೆಯ ಅಟ್ಟಹಾಸ ತಳ ಸಮುದಾಯದ ಮೇಲೆ ನಡೆಯುತ್ತಿದೆ.

ಇದಕ್ಕೆ ಉದಾಹರಣೆ ಎಂಬಂತೆ ಜಂಬಣ್ಣ ಅಮರಚಿಂತರು ರಚಿಸಿದ ಕಾವ್ಯ 'ಪೆಟ್ರೋಮ್ಯಾಕ್ಸ್ ಹೊತ್ತವರು' ಕವಿತೆಯು ಉತ್ತರ ಕರ್ನಾಟಕದಲ್ಲಿ ಆಯಗಾರ ವೃತ್ತಿಯನ್ನು ಮಾಡುವ ಜನಾಂಗದವರು ಅನುಭವಿಸುವ ನೋವುಗಳನ್ನು ಹಾಗೂ ಅವರ ಜೀವನದ ಸ್ಥಿತಿಗತಿಗಳನ್ನು ಈ ಕವಿತೆ ಅನಾವರಣಗೊಳಿಸಿದೆ.

ಪೆಟ್ರೋಮ್ಯಾಕ್ಸ್ ಹೊತ್ತವರು ಕವಿತೆಯಲ್ಲಿ ಆಯಗಾರರು: ಆಯಗಾರ ಇದು ಒಂದು ವೃತ್ತಿಯಾಗಿದ್ದು ಶ್ರೀಮಂತರು ನಡೆಸುವ ಶುಭಸಮಾರಂಭಗಳಲ್ಲಿ ಮತ್ತು ಮೆರವಣಿಗೆಗಳಲ್ಲಿ ಉರಿಯುವ ಗ್ಯಾಸ್‌ಗಳನ್ನು ತನ್ನ ತಲೆಯ ಮೇಲೆ ಹೊತ್ತು ನಡೆಯುವ ಒಂದು ಶೋಷಿತ ಸಮುದಾಯಕ್ಕೆ ಸೇರಿದವರು. ಮೂಲತಃ ಅನಕ್ಷರಸ್ಥರಾದ ಇವರು ಜೀವನದುದ್ದಕ್ಕೂ ಬಡತನದಲ್ಲಿ ಜೀವನ ನಡೆಸುವವರು ಯಾವ ಗೊತ್ತು ಗುರಿಯಿಲ್ಲದೆ ಹೊಟ್ಟೆಪಾಡಿಗಾಗಿ ದುಡಿಯುವ ವರ್ಗ, ಆಯಾಗಾರ ವೃತ್ತಿ ಬಿಟ್ಟರೆ ಬೇರೆ ಕಾಯಕ ಗೊತ್ತಿಲ್ಲ. ಸಂವಿಧಾನ ಇದ್ದರೂ ಕೂಡ ಇವರ ಬಗ್ಗೆ ಯಾರೂ ಗಮನ ಹರಿಸುವುದಿಲ್ಲ. ಇವರ ತೊಂದರೆಗಳನ್ನು ಯಾರೂ ಕೇಳುವುದಿಲ್ಲ ಉತ್ತರ ಕರ್ನಾಟಕದಲ್ಲಿ ಈ ಸಮುದಾಯ ಹಣ ಅಧಿಕಾರ ಪಡೆಯದವರು ಅನೇಕ

ಜನ ಇದ್ದಾರೆ. ಆದರೆ ಎಲ್ಲರಿಗೂ ಬೆಳಕನ್ನ ನೀಡುವ ಈ ಜನಾಂಗ ತಾವು ಮಾತ್ರ ಕತ್ತಲೆಯ, ಅಂಧಕಾರದ ಮಡುವಿನಲ್ಲಿ ಜೀವನ ನಡೆಸುತ್ತಿದ್ದಾರೆ.

**ಪೆಟ್ರೋಮ್ಯಾಕ್ಸ್ ಹೊತ್ತವರು ಕಾವ್ಯದಲ್ಲಿ ಹಸಿವು:**

ಅಮರಚಿಂತರ ಈ ಕಾವ್ಯ ಎಲ್ಲಾ ಓದುಗರನ್ನು ಚಿಂತನೆಗೆ ಹಚ್ಚುವಂತಹ ಕಾವ್ಯವಾಗಿದ್ದು, ಈ ಗ್ಯಾಸ್ ದೀಪವನ್ನು ಹೊತ್ತ ಆಯಾಗಾರ ವೃತ್ತಿ ಮಾಡುವ ಶೋಷಿತ ಸಮುದಾಯದವರು. "ಯಾರಿವರು ಯಾವ ಕಡೆ ನಡೆದಿರುವವರು" ಎನ್ನುವಲ್ಲಿ ಈ ಸಮಾಜದಲ್ಲಿ ಯಾರು ಕೂಡ ಇವರ ಕಡೆ ಗಮನ ಹರಿಸಿಲ್ಲ ಎಂಬುದನ್ನು ಒತ್ತಿ ಹೇಳುತ್ತದೆ. ಯಾವ ಕಡೆ ನಡೆಯುತ್ತಿದ್ದಾರೆ ಎಂಬ ಅರಿವು ಕೂಡ ಈ ಸಮುದಾಯಕ್ಕೆ ಇಲ್ಲ ಎಂಬುದನ್ನು ಅನಾವರಣಗೊಳಿಸಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಕೂಡ ಈ ಶೋಷಿತ ಸಮುದಾಯಕ್ಕೆ ಇನ್ನು ಸ್ವಾತಂತ್ರ್ಯ ಸಮಾನತೆಯನ್ನು ನಾವು ನೋಡುವುದಕ್ಕೆ ಸಾಧ್ಯವಾಗುತ್ತಿಲ್ಲ.

**'ತಲತಲಾಂತರ ತಲೆಯ ಮೇಲೆ**
**ಬೆಳಕು ಹೊತ್ತು ಸಾಗಿದವರು**
**ಅವರಿವರು, ಯಾರಿಗ್ಯಾಕೆ**
**ತಮ್ಮ ನೆರಳಿಗೆ ಅಪರಿಚಿತರು'**

**– 3. ಸಾ.ಚ. ಪು.ಸಂ. 55**

ಶತಶತಮಾನಗಳಿಂದ ತನ್ನ ತಲೆಯ ಮೇಲೆ ಗ್ಯಾಸ್ ದೀಪದ ಬೆಳಕನ್ನು ಹೊತ್ತು ಎಲ್ಲರಿಗೂ ಬೆಳಕನ್ನು ನೀಡುತ್ತ ಹೊರಟ ಈ ಶೋಷಿತ ಸಮುದಾಯ ಅವರ ಹಸಿವಿನ ಕರಾಳತೆಯನ್ನು ಬಡತನವನ್ನು ಎತ್ತಿತೋರಿಸುತ್ತದೆ. ತಮ್ಮ ನೆರಳಿಗೆ ತಾವೇ ಅಪರಿಚಿತರು ಎಂದು ಹೇಳುವಲ್ಲಿ ಅವರ ನೆರಳು ಅವರ ಕಾಲಿಗೆ ಬೀಳುವುದರಿಂದ ತಾವೇ ತಮ್ಮ ನೆರಳಿಗೆ ಅಪರಿಚಿತರಾಗಿ ಕಾಣುತ್ತಿದ್ದಾರೆ ಎಂದರೆ ಅವರ ಹಸಿವಿನ ಕರಾಳತೆಯ ಮುಖಗಳನ್ನು ಈ ಕವಿತೆ ಹೇಗೆ ಅನಾವರಣಗೊಳಿಸುತ್ತಿದೆ ಎಂಬುದನ್ನು ತಿಳಿಯಬಹುದು. ಶ್ರೀಮಂತರ ದಬ್ಬಾಳಿಕೆಯನ್ನು ಸಹ ನಾವು ಇಲ್ಲಿ ಗಮನಿಸಬಹುದು. ಉಳ್ಳವರ ಶ್ರೀಮಂತರ ಮುಂದೆ ಎದುರು ಮರು ಮಾತನಾಡದೆ ಅವರು ಹೇಳಿದಂತ ರೀತಿಯಲ್ಲಿ ಹೇಳಿದ ಸಮಯದವರೆಗೂ ಗ್ಯಾಸ್ ದೀಪವನ್ನು ತಲೆಯ ಮೇಲೆ ಹೊತ್ತು ಅವರು ಕೊಡುವ ಅಲ್ಪ ಕಾಣಿಕೆಯನ್ನು ಸ್ವೀಕರಿಸಿ ಮರು ಮಾತನಾಡದೆ ಅವರ ಸೇವೆಯನ್ನು ಮಾಡುವ ಈ ಸಮುದಾಯ ಶೋಷಣೆಗೆ ಒಳಗಾಗುವ ರೀತಿಯನ್ನು ಕೆಳವರ್ಗದವರನ್ನು ಶೋಷಣೆಗೆ ಒಳಪಡಿಸಿ ಅಮಾನವೀಯ ಕೃತ್ಯವನ್ನು ಹೇಗೆ ಉಳ್ಳವರು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದ್ದರು ಎಂಬುದನ್ನು ಅಮರಚಿಂತರ ಈ ಕಾವ್ಯದಲ್ಲಿ ಅನಾವರಣಗೊಳಿಸಿದ್ದಾರೆ.

**ತಲೆಯ ಮೇಲೆ ಬಿಸಿಲಿನ ಕಾವು**

**ಹೊಟ್ಟೆಯೊಳಗೆ ಹಸಿವಿನ ಗಾವು**
**ಜೀವನವೆಲ್ಲ ಕುದ್ದು ಕುದ್ದು**
**ಆವಿಯಾಗಿ ಹೋದವರು**
**ನಿತ್ಯ ನಿತ್ಯ ಹೊಟ್ಟೆಯಿಂದ**
**ಹಸಿವನ್ನು ಹೆತ್ತವರು**

**3. ಸಾ.ಚ. ಪು.ಸಂ. 55**

ಅಮರಚಿಂತರ ಈ ಸಾಲುಗಳು ಆಯಗಾರ ವೃತ್ತಿಯನ್ನು ಮಾಡುವ ಶೋಷಿತ ಸಮುದಾಯದವರ ಹಸಿವಿನ ಕರಾಳತೆಯನ್ನು ಎತ್ತಿ ತೋರಿಸುತ್ತದೆ. ಅನಕ್ಷರಸ್ಥರಾದ ಇವರು ತಲೆಯ ಮೇಲೆ ಹೊರುವ ಗ್ಯಾಸ್ ದೀಪದ ಉರಿ ಅದು ಸಾಮಾನ್ಯ ಉರಿಯಲ್ಲ ಅದು ತನ್ನ ಹೊಟ್ಟೆಯಲ್ಲಿ ಉಂಟಾದ ಹಸಿವಿನ ಕಾವು (ಬಿಸಿ) ಎಂದು ಅರ್ಥವನ್ನು ಕೊಡುತ್ತದೆ. ಗ್ಯಾಸ್ ದೀಪದ ಬಿಸಿ ಬಿಸಿಯೂ ಹೌದು ಹೊಟ್ಟೆಯೊಳಗಿನ ಹಸಿವಿನ ಬಿಸಿಯೂ ಹೌದು. ಅಂದರೆ ಅವರ ಹಸಿವಿನ ಪರಿಸ್ಥಿತಿ ಜೀವನದುದ್ದಕ್ಕೂ ಕಾಡುವ ಪ್ರಸಂಗವಾಗಿ ಕಂಡು ಬರುತ್ತದೆ. ಹೊಟ್ಟೆ ತುಂಬಿದವರ ಆಡಂಬರದ ಶ್ರೀಮಂತರ ಜೀವನ ಶೈಲಿ ಒಂದು ಕಡೆಯಾದರೆ ಹಸಿವಿನಿಂದ ಗ್ಯಾಸ್ ದೀಪವನ್ನು ಹೊತ್ತು ಬಡತನದ ಜೀವನವನ್ನು ಸಾಗಿಸುವ ಅಮಾನವೀಯ ಪ್ರವೃತ್ತಿಯನ್ನು ನಾವು ಗಮನಿಸಬಹುದು. ಇವರ ಜೀವನದಲ್ಲಿ ಸಂಪೂರ್ಣವಾಗಿ ಹಸಿವಿನಿಂದಲೇ ಆವಿಯಾಗಿದ್ದಾರೆ ಎಂಬುದನ್ನು ಅಮರಚಿಂತರು ಬಡತನದ ವಿವಿಧ ಮುಖಗಳನ್ನು ಈ ಕಾವ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ.

ಇನ್ನು ರಾಜಕೀಯವಾಗಿ ಗೆದ್ದಂತಹ ನಾಯಕರಾದರೂ ಈ ಸಮುದಾಯದ ಬಗ್ಗೆ ಏನಾದರೂ ಕರುಣೆ ತೋರುವ ಮನೋಭಾವ ಮಾನವೀಯತೆ ಇದೆ ಎನ್ನುವುದಾದರೆ ಆ ರೀತಿಯ ಯಾವುದೇ ಒಳ್ಳೆಯ ಸೂಚನೆಗಳನ್ನು ನೋಡಲು ಸಾಧ್ಯವಿಲ್ಲ.

**"ಇದ್ದವರು ಕದ್ದವರು**
**ಚುನಾವಣೆ ಗೆದ್ದವರು**
**ಇವರು ಹೊತ್ತ ಬೆಳಕಿನಲ್ಲಿ**
**ಲಕಲಕ ಹೊಳೆದರು"**

**3. ಸಾ.ಚ. ಪು.ಸಂ. 55**

ಶ್ರೀಮಂತ ವ್ಯಕ್ತಿಗಳು ರಾಜಕೀಯ ವ್ಯಕ್ತಿಗಳು ಅಧಿಕಾರದ ಆಸೆಗೆ ಕೇವಲ ಓಟಿಗಾಗಿ ಈ ಜನರನ್ನು ಬಳಸಿಕೊಂಡು ನಂತರ ಯಾವುದೇ ಸಂದರ್ಭದಲ್ಲಿಯೂ ಕೂಡ ಇವರ ಬಡತನವನ್ನಾಗಲಿ, ಹಸಿವನ್ನಾಗಲಿ ತೀರಿಸುವ ಕಾರ್ಯಕ್ಕೆ ಮುಂದಾಗಲಿಲ್ಲ ಎಂಬುದೇ ವಿಪರ್ಯಾಸ. ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಈ ಸಮುದಾಯದ ಮತ ಬೇಕು ಆದರೆ ಅವರ ಬೆಳವಣಿಗೆಗೆ ಅವರ ಜೀವನದ ಬಡತನ

ಹಸಿವನ್ನು ನೀಗಿಸುವುದಕ್ಕೆ ಮಾತ್ರ ಮನಸ್ಸು ಮಾಡುವುದಿಲ್ಲ ಇವರು ಹೊತ್ತ ಗ್ಯಾಸ್ ದೀಪದ ಬೆಳಕಿನಲ್ಲಿ ಅವರು ಸುಂದರವಾದ ಜೀವನ ಮಾಡುತ್ತಾರೆ. ಆದರೆ ಈ ಸಮುದಾಯದ ಜನರು ಜೀವನದಲ್ಲಿ ಬೆಳಕನ್ನು ನೋಡಲು ಸಾಧ್ಯವಾಗಲೇ ಇಲ್ಲ. ಶ್ರೀಮಂತ ಬಡತನ ಹಾಗೂ ಆಡಂಬರ ಹಸಿವಿನ ಕರಾಳತೆಯನ್ನು ಅಮರ ಚಿಂತರು ಸಾರಿ ಹೇಳಿದ್ದಾರೆ.

ಕೊನೆಯದಾಗಿ ಮತ್ತೆ ಪ್ರಶ್ನೆಯನ್ನು ಕೇಳುತ್ತ

**"ಯಾರಿವರು ಯಾರಿವರು**
**ಕಣ್ಣಿಗಂತೂ ಕಾಣರು**
**ಪೆಟ್ರೋಮ್ಯಾಕ್ಸ್ ಹೊತ್ತವರು**
**ಬೆಳಕಿನಡಿಯ ಕತ್ತಲಲ್ಲಿ**
**ಕತ್ತಲಾಗಿ ನಿಂತವರು"**

**3. ಸಾ.ಚ. ಪು.ಸಂ. 55**

ಶ್ರೀಮಂತ ವರ್ಗದವರು ಎಲ್ಲಾ ರೀತಿಯಲ್ಲಿ ಇವರಿಂದ ಉಪಯೋಗವನ್ನು ಪಡೆದುಕೊಂಡರೂ ಸಹ ಯಾರ ಕಣ್ಣಿಗೂ ಕಾಣದೆ ಕತ್ತಲೆಯ ಬುಡದಲ್ಲಿ ನಿಂತು ಎಲ್ಲರಿಗೂ ಬೆಳಕನ್ನು ಕೊಡುವ ಈ ಆಯಗಾರ ವೃತ್ತಿಯನ್ನು ಮಾಡುವ ಈ ಸಮುದಾಯದವರಿಗೆ ಸಮಾನತೆ ದೊರಕಬೇಕಿದೆ. ಅವರ ಹಸಿವಿನ ತಾಪವನ್ನು ಕಡಿಮೆ ಮಾಡುವ ಮಾನವೀಯ ಮೌಲ್ಯಗಳನ್ನು ಒಳಗೊಂಡ ರಾಜಕೀಯ ವ್ಯಕ್ತಿಗಳು ಇವರ ಕಡೆ ಗಮನ ಹರಿಸುವಂತಹ ಅವಶ್ಯಕತೆ ಇದೆ. ಉಳ್ಳವರು ಬದಲಾಗಲೇ ಬೇಕಾದ ಅನಿವಾರ್ಯತೆ ಮತ್ತು ಅವಶ್ಯಕತೆ ತುಂಬಾ ಮುಖ್ಯ ಹಾಗೂ ಅವರು ಕೂಡ ಮನುಷ್ಯರೇ ಕೇವಲ ಮನುಷ್ಯರಾಗಿ ಕಾಣುವಂತಾದರೆ ಅವರು ಕೂಡ ಸಮಾಜದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಆಗ ಮಾತ್ರ ಬಡತನ ಹಸಿವಿನ ಕರಾಳ ಮುಖಗಳಿಂದ ಹೊರ ಬರಲು ಸಾಧ್ಯ. ಕೊನೆಯದಾಗಿ ಡಾ. ಸಿದ್ದಲಿಂಗಯ್ಯರ ಸಾವಿರಾರು ನದಿಗಳ ಸಾಲುಗಳನ್ನು ಇಲ್ಲಿ ಉಲ್ಲೇಖಿಸಿದ್ದೇನೆ.

**"ಬೀದಿಯಲ್ಲಿ ಗಲ್ಲಿಯಲ್ಲಿ**
**ಬೇಲಿ ಮೆಳೆಯ ಮರೆಗಳಲ್ಲಿ**
**ಯಜಮಾನರ ಹಟ್ಟಿಯಲ್ಲಿ**
**ಧಣಿಕೂರುವ ಪಟ್ಟದಲ್ಲಿ**
**ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು"**

**1. ಮೆ. ಪು.ಸಂ. 85**

**ಪರಾಮರ್ಶನ ಗ್ರಂಥಗಳು:**

1. ಸಿದ್ಧಲಿಂಗಯ್ಯ, (2007), ಮೆರವಣಿಗೆ, ಅಂಕಿತ ಪುಸ್ತಕ, ಬೆಂಗಳೂರು.
2. ಜಂಬಣ್ಣ ಅಮರಚಿಂತ, (1982), ಅಧೋ ಜಗತ್ತಿನ ಅಕಾವ್ಯ, ಬಂಡಾಯ ಸಾಹಿತ್ಯ ಪ್ರಕಾಶನ, ರಾಯಚೂರು.
3. ಕರ್ನಾಟಕ ಪತ್ರ ಪುಸ್ತಕ ಸಂಘ, (2011), ಸಾಹಿತ್ಯ ಚಂದನ, ಶ್ರೀ ಸುಬ್ರಮಣ್ಯ ಪ್ರಕಾಶನ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.